| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 50 + 28 = 78 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 16

Total No. of Questions : 50 + 28 = 78 ] [ Total No. of Printed Pages : 16

**ಸಂಕೇತ ಸಂಖ್ಯೆ : 01-K**

**Code No. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

ದಿನಾಂಕ : 02. 06. 2008 ] [ Date : 02. 06. 2008

ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-30 A.M. to 1-30 P.M.

ಪರಮಾವಧಿ ಅಂಕಗಳು : 125 ] [ Max. Marks : 125

**FOR OFFICE USE ONLY**

**PART – A**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 1. | | 10. | | 19. | | 28. | | 37. | | 46. | |
| 2. | | 11. | | 20. | | 29. | | 38. | | 47. | |
| 3. | | 12. | | 21. | | 30. | | 39. | | 48. | |
| 4. | | 13. | | 22. | | 31. | | 40. | | 49. | |
| 5. | | 14. | | 23. | | 32. | | 41. | | 50. | |
| 6. | | 15. | | 24. | | 33. | | 42. | | ∞ | |
| 7. | | 16. | | 25. | | 34. | | 43. | | ∞ | |
| 8. | | 17. | | 26. | | 35. | | 44. | | ∞ | |
| 9. | | 18. | | 27. | | 36. | | 45. | | ∞ | |
| *Total Marks of Part – A* | | | | | | | | | | | |

**PART – B**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 51. | | 56. | | 61. | | 66. | | 71. | | 76. | |
| 52. | | 57. | | 62. | | 67. | | 72. | | 77. | |
| 53. | | 58. | | 63. | | 68. | | 73. | | 78. | |
| 54. | | 59. | | 64. | | 69. | | 74. | | ∞ | |
| 55. | | 60. | | 65. | | 70. | | 75. | | ∞ | |
| *Total Marks of Part – B* | | | | | | | | | | | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕವು **ಎರಡು** ವಿಭಾಗಗಳನ್ನು ಹೊಂದಿದೆ. ಅವು ಎ – **ವಿಭಾಗ** ಮತ್ತು ಬಿ – **ವಿಭಾಗ.**

ii) ಎ – **ವಿಭಾಗ** 50 ಪ್ರಶ್ನೆಗಳನ್ನು ಹೊಂದಿದೆ ಮತ್ತು ಬಿ – **ವಿಭಾಗ** 28 ಪ್ರಶ್ನೆಗಳನ್ನು ಹೊಂದಿದೆ.

iii) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲೇ ಉತ್ತರಿಸಲು ಸ್ಥಳಾವಕಾಶ ಮಾಡಲಾಗಿದೆ.

iv) ಎ – **ವಿಭಾಗದಲ್ಲಿರುವ** ಸೂಚನೆಗಳನ್ನು ಅನುಸರಿಸಿ ಮತ್ತು ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲಿ ನಾಲ್ಕು ಪರ್ಯಾಯ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿಯೇ ಬರೆಯಿರಿ.

v) ಬಿ – **ವಿಭಾಗದ** ಪ್ರತಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

## ಎ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಬರೆಯಿರಿ : 50 ∞ 1 = 50

1. ಸಿಂಹಕ್ಕೆ ಮಾರಿ ಬಂದಂತೆ ಸರದಿ ಬಂದದ್ದು ಯಾರಿಗೆ ?

(ಎ) ದೀರ್ಘಕರ್ಣನಿಗೆ (ಬಿ) ನರಿಗೆ

(ಸಿ) ದುರ್ಗಸಿಂಹನಿಗೆ (ಡಿ) ಆನೆಗೆ

*ಉತ್ತರ :* ____________

2. ಅಂಗುಲಿಮಾಲನಿಗೆ ಬೇಸರವಾದದ್ದು ಯಾವುದು ?

(ಎ) ಕಿರೀಟ (ಬಿ) ಧರಿಸಿರುವ ವಸ್ತ್ರ

(ಸಿ) ಖಡ್ಗ (ಡಿ) ಹಳೆಯ ಅಂಗುಲಿಮಾಲೆ

*ಉತ್ತರ :* ____________

3. ಅಂಕಿತನಾಮ ಪದಕ್ಕೆ ಉದಾಹರಣೆ

(ಎ) ಅವನು (ಬಿ) ಮನೆ

(ಸಿ) ಕುರುಡ (ಡಿ) ಹಿಮಾಲಯ

*ಉತ್ತರ :* ____________

4. ಷಟ್ಪದಿಯ ಪಾದಗಳ ಸಂಖ್ಯೆ ಎಷ್ಟು ?

(ಎ) ಆರು (ಬಿ) ಮೂರು

(ಸಿ) ನಾಲ್ಕು (ಡಿ) ಹದಿನಾಲ್ಕು

*ಉತ್ತರ :* ____________

5. ಮೈಸೂರು ಕಾಂಗ್ರೆಸ್ ಅರಣ್ಯ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದು ಯಾವಾಗ ?

(ಎ) 1939 ಅಕ್ಟೋಬರ್ (ಬಿ) 1939 ಸೆಪ್ಟೆಂಬರ್

(ಸಿ) 1939 ಆಗಸ್ಟ್ (ಡಿ) 1931 ಡಿಸೆಂಬರ್

*ಉತ್ತರ :* ____________

6. 'ಜಾತಕ ತಿಲಕಂ' ಕೃತಿಯ ಕರ್ತೃ ಯಾರು ?

(ಎ) ಡಾ॥ ಪ್ರಭುಶಂಕರ (ಬಿ) ಎಂ. ಮರಿಯಪ್ಪ ಭಟ್ಟ

(ಸಿ) ಸೇಡಿಯಾಪು ಕೃಷ್ಣಭಟ್ಟ (ಡಿ) ಎಂ.ಎಸ್. ಸುಂಕಾಪುರ

ಉತ್ತರ : ______

7. ನಾಟಕಕಾರ ಶೆರಿಡಿನ್ ಈ ಪಾರ್ಲಿಮೆಂಟಿನ ಸದಸ್ಯನಾಗಿದ್ದ :

(ಎ) ಇಂಡಿಯಾ (ಬಿ) ದಕ್ಷಿಣ ಆಫ್ರಿಕಾ

(ಸಿ) ಅಮೆರಿಕಾ (ಡಿ) ಬ್ರಿಟಿಷ್

ಉತ್ತರ : ______

8. ಎಣ್ಣೆ – ತುಪ್ಪದ ಮಿಶ್ರಣ ಬೇಡವೆಂದವರು ಯಾರು ?

(ಎ) ನಯಸೇನ (ಬಿ) ಮರಿಯಪ್ಪ ಭಟ್ಟ

(ಸಿ) ಪಂಪ (ಡಿ) ಮಹಲಿಂಗ ರಂಗ

ಉತ್ತರ : ______

9. 'ಕಾಕ' ಪದದ ಅರ್ಥ

(ಎ) ಕೋಗಿಲೆ (ಬಿ) ಬೆಲ್ಲ

(ಸಿ) ಕಾಗೆ (ಡಿ) ನವಿಲು

ಉತ್ತರ : ______

10. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳ ಸಂಖ್ಯೆ

(ಎ) 25 (ಬಿ) 5

(ಸಿ) 9 (ಡಿ) 34

ಉತ್ತರ : ______

11. 'ಮಗುವಿಗೆ' ಪದವು ಯಾವ ಸಂಧಿಗೆ ಉದಾಹರಣೆಯಾಗಿದೆ ?

(ಎ) ಯಣ್ ಸಂಧಿ (ಬಿ) ಆದೇಶ ಸಂಧಿ

(ಸಿ) ಆಗಮ ಸಂಧಿ (ಡಿ) ಲೋಪ ಸಂಧಿ

ಉತ್ತರ : ______

12. ಇವುಗಳಲ್ಲಿ ಯಾವುದು ಸರ್ವನಾಮ ಪದಕ್ಕೆ ಉದಾಹರಣೆಯಾಗಿದೆ ?

(ಎ) ಬಲರಾಮ (ಬಿ) ಪರ್ವತ

(ಸಿ) ಅದು (ಡಿ) ಐದು

ಉತ್ತರ : ______

13. 'ದೆಸೆಯಿಂದ' ಈ ಪದದಲ್ಲಿರುವ ವಿಭಕ್ತಿ ಯಾವುದು ?

(ಎ) ಪಂಚಮೀ (ಬಿ) ತೃತೀಯಾ

(ಸಿ) ಸಪ್ತಮೀ (ಡಿ) ಚತುರ್ಥೀ

ಉತ್ತರ : ______

14. ಸತ್ಯವಂತರ ಸಂಗವಿರುವವನಿಗೆ ಯಾವುದು ಬೇಡ ?

(ಎ) ಅರಿವು (ಬಿ) ಭಯವು

(ಸಿ) ಜನುಮವು (ಡಿ) ತೀರ್ಥವು

*ಉತ್ತರ :* ______________________________

15. ಲೋಕದೊಳಗೆ ನಿಂದ್ಯನಾದವನು ಯಾರು ?

(ಎ) ಪರಹಿತನು (ಬಿ) ಪರನಿಂದಕನು

(ಸಿ) ಪರಗುಣ ಸೈರಿಸದವನು (ಡಿ) ಗುರುವರಿಯದವನು

*ಉತ್ತರ :* ______________________________

16. ಹೊಳೆ ದಂಡೆಯಲಿರುವ ಕರಿಕೆಯಂತೆ ಹಬ್ಬಲೆಂದು ಗರತಿ ಯಾವುದನ್ನು ಕುರಿತು ಹೇಳಿದಳು ?

(ಎ) ಮಾವನ ಮನೆ (ಬಿ) ತವರು ಮನೆ

(ಸಿ) ಹೊಳೆ ದಡ (ಡಿ) ದೇಶವನ್ನು

*ಉತ್ತರ :* ______________________________

17. ಬನವಾಸಿಯಲ್ಲಿ ಮಾನವನಾಗಿ, ಇಲ್ಲದಿದ್ದರೆ ಕೋಗಿಲೆಯಾಗಿ, ಇಲ್ಲದಿದ್ದರೆ ಮರಿದುಂಬಿಯಾಗಿ ಹುಟ್ಟುವ ಬಯಕೆ ವ್ಯಕ್ತಪಡಿಸಿದವರು ಯಾರು ?

(ಎ) ನೃಪತುಂಗ (ಬಿ) ಲಕ್ಷ್ಮೀಧರಾಮಾತ್ಯ

(ಸಿ) ಕಪ್ಪೆ ಅರಭಟ್ಟ (ಡಿ) ಪಂಪ

*ಉತ್ತರ :* ______________________________

18. ಕಾಳಿದಾಸನು ಯಾವ ನಗರದವನು ?

(ಎ) ಮದ್ರಾಸ್ (ಬಿ) ಕಲ್ಕತ್ತ

(ಸಿ) ಬೆಂಗಳೂರು (ಡಿ) ಉಜ್ಜಯಿನಿ

*ಉತ್ತರ :* ______________________________

19. ಸೇಡಿಯಾಪು ಕೃಷ್ಣಭಟ್ಟರ ಯಾವ ಕೃತಿಗೆ ಪಂಪ ಪ್ರಶಸ್ತಿ ಲಭಿಸಿದೆ ?

(ಎ) ಪಳಮೆಗಳು (ಬಿ) ವಿಚಾರ ಪ್ರಪಂಚ

(ಸಿ) ಛಂದೋಗತಿ (ಡಿ) ಕನ್ನಡ ಛಂದಸ್ಸು

*ಉತ್ತರ :* ______________________________

20. 'ಮಂಕುತಿಮ್ಮನ ಕಗ್ಗ' ಕೃತಿಯ ರಚನೆಕಾರರು ಯಾರು ?

(ಎ) ಡಿ.ವಿ. ಗುಂಡಪ್ಪ (ಬಿ) ಪುಲಿಗೆರೆ ಸೋಮನಾಥ

(ಸಿ) ಸೋಮೇಶ್ವರ (ಡಿ) ಕನಕದಾಸ

*ಉತ್ತರ :* ______________________________

21. ಕಾಂಗೋ ಕಾರ್ಯಾಚರಣೆಯಲ್ಲಿ 40 ವೈರಿ ಸೈನಿಕರನ್ನು ಕೊಂದ ಭಾರತೀಯ ಯೋಧ

(ಎ) ಮನಮೋಹನ್ ಸಿಂಗ್ (ಬಿ) ಗುರುಚರಣ ಸಿಂಗ್

(ಸಿ) ಗುರು ಬಚ್ಚನ್ ಸಿಂಗ್ (ಡಿ) ಜನರಲ್ ಕಾರಿಯಪ್ಪ

*ಉತ್ತರ :* ______________________________

22. ಅಮಾತ್ಯ ರಾಕ್ಷಸನ ಪರಮಮಿತ್ರ ಯಾರು ?

(ಎ) ವಿಷ್ಣುದಾಸ (ಬಿ) ಚಂದನದಾಸ

(ಸಿ) ಚಾಣಕ್ಯ (ಡಿ) ಪಶುಲೋಮ

*ಉತ್ತರ :* ______________________________

23. ಹೊಟ್ಟೆಯಲ್ಲಿ ಕಶ್ಮಲ ತುಂಬಿಕೊಂಡಿರುವ ವ್ಯಕ್ತಿ ಸ್ನಾನ ಮಾಡಿದರೆ ಏನಾಗುವುದಿಲ್ಲ ?

(ಎ) ಶುಚಿ (ಬಿ) ಮೋಕ್ಷ

(ಸಿ) ರುಚಿ (ಡಿ) ಸರ್ವಜ್ಞ

*ಉತ್ತರ :* ______________________________

24. ಹಿಮಾಲಯ ಯಾವುದರಿಂದ ಕೂಡಿದೆ ?

(ಎ) ರಾಗ ನಾದ (ಬಿ) ಹಕ್ಕಿ ಸಂಕುಲ

(ಸಿ) ಮಾವು ಬೇವು (ಡಿ) ಗಂಧ ಕುಸುಮ

*ಉತ್ತರ :* ______________________________

25. 'ಕಿವಿಯೊಳ್' ಎಂಬುದರ ಹೊಸಗನ್ನಡ ರೂಪ ಯಾವುದು ?

(ಎ) ಕಿವಿಗೆ (ಬಿ) ಕಿವಿಯೊಳಗೆ

(ಸಿ) ಕಿವಿಯಲ್ಲಿ (ಡಿ) ಕಿವಿಯಿಂದ

*ಉತ್ತರ :* ______________________________

26. 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗೆ ಇರುವ ಇನ್ನೊಂದು ಹೆಸರು

(ಎ) ಗದುಗಿನ ಭಾರತ (ಬಿ) ಮಹಾಭಾರತ

(ಸಿ) ವಚನ ಭಾರತ (ಡಿ) ವ್ಯಾಸ ಭಾರತ

*ಉತ್ತರ :* ______________________________

27. 'ಶಶಿಯೊಳಡಗಿದ ಷೋಡಷ ಕಳೆಯಂತೆ' – ಇಲ್ಲಿರುವ ಅಲಂಕಾರ

(ಎ) ಶ್ಲೇಷಾಲಂಕಾರ (ಬಿ) ಉಪಮಾಲಂಕಾರ

(ಸಿ) ರೂಪಕಾಲಂಕಾರ (ಡಿ) ದೃಷ್ಟಾಂತಾಲಂಕಾರ

*ಉತ್ತರ :* ______________________________

28. 'ನುಡಿನುಡಿದು' ಇದು ಯಾವ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ ?

(ಎ) ಜೋಡುನುಡಿ (ಬಿ) ಪಡೆನುಡಿ

(ಸಿ) ಅನುಕರಣಾವ್ಯಯ (ಡಿ) ದ್ವಿರುಕ್ತಿ

*ಉತ್ತರ :* __________

29. ಇವುಗಳಲ್ಲಿ ತದ್ಧಿತಾಂತ ನಾಮಪದಕ್ಕೆ ಉದಾಹರಣೆ ಯಾವುದು ?

(ಎ) ಕುರುಡ (ಬಿ) ಕಾವೇರಿ

(ಸಿ) ಬಂಗಾರ (ಡಿ) ಕನ್ನಡಿಗ

*ಉತ್ತರ :* __________

30. ಸಿದ್ದಪ್ಪನ ಸತಿಯ ಹೆಸರು ಏನು ?

(ಎ) ಗೌರಿ (ಬಿ) ಸಾಕಮ್ಮ

(ಸಿ) ಸಾವಿತ್ರಮ್ಮ (ಡಿ) ಲಕ್ಕಮ್ಮ

*ಉತ್ತರ :* __________

31. 'ತ್ಯಾಗಮಯಿ' ಗದ್ಯ ಪಾಠದ ಆಕರ ಗ್ರಂಥ ಯಾವುದು ?

(ಎ) ಹೊನ್ನಾರು (ಬಿ) ಇಬ್ಬನಿ

(ಸಿ) ಜನಪದ ಕಥಾವಳಿ (ಡಿ) ದೀನಬಂಧು

*ಉತ್ತರ :* __________

32. ಕಡಿದಾಳ್ ಮಂಜಪ್ಪನವರು ಚಳುವಳಿ ನಡೆಸುತ್ತಿದ್ದ ಕಾಲದಲ್ಲಿ ಯಾರು ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದರು ?

(ಎ) ಮಾಣಿಕ್ಯಂ (ಬಿ) ವೆಂಕಟಸುಬ್ಬಯ್ಯ

(ಸಿ) ಎಂ. ಶೇಷಾದ್ರಿ (ಡಿ) ಮುನಿಯಪ್ಪ

*ಉತ್ತರ :* __________

33. ತಿಪ್ಪೇನಹಳ್ಳಿ ಶಾಲೆಯ ಮೇಷ್ಟ್ರ ಹೆಸರೇನು ?

(ಎ) ವೆಂಕಟಸುಬ್ಬಯ್ಯ (ಬಿ) ರಂಗಣ್ಣ

(ಸಿ) ವೆಂಕಣ್ಣ (ಡಿ) ಪರಂಗಿ ಸಾಹೇಬರು

*ಉತ್ತರ :* __________

34. ವೆಂಕಣ್ಣ ಮೇಷ್ಟ್ರ ಹೆಂಡತಿ ತೀರಿಹೋಗಲು ಕಾರಣವೇನು ?

(ಎ) ಜ್ವರದಿಂದ (ಬಿ) ಪ್ಲೇಗಿನಿಂದ

(ಸಿ) ಸಿಡುಬಿನಿಂದ (ಡಿ) ಆತ್ಮಹತ್ಯೆಯಿಂದ

*ಉತ್ತರ :* __________

35. ತಮ್ಮ ಗ್ರಾಮಕ್ಕೆ ಹೆಚ್ಚು ಬಸ್ಸು ಬರುವುದೆಂದು ತಿಳಿದು ಗ್ರಾಮಸ್ಥರು ಸಂತಸಪಟ್ಟರು. – ಇದು ಎಂಥ ವಾಕ್ಯ ?

(ಎ) ಸಂಯೋಜಿತ ವಾಕ್ಯ (ಬಿ) ಮಿಶ್ರ ವಾಕ್ಯ

(ಸಿ) ಸಾಮಾನ್ಯ ವಾಕ್ಯ (ಡಿ) ಪರಿವರ್ತಿತ ವಾಕ್ಯ

*ಉತ್ತರ :* __________

36. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

(ಎ) ಉದ್ಧರಣ (ಬಿ) ವಾಕ್ಯವೇಷ್ಟನ

(ಸಿ) ವಿವರಣಾತ್ಮಕ (ಡಿ) ಪ್ರಶ್ನಾರ್ಥಕ

*ಉತ್ತರ :* __________

37. 'ಹಾಡುವಿಕೆ' ಇದು ಯಾವ ಕೃದಂತಕ್ಕೆ ಉದಾಹರಣೆ ?

(ಎ) ನಿಷೇದ ಕೃದಂತ (ಬಿ) ಕೃದಂತ ಭಾವನಾಮ

(ಸಿ) ವರ್ತಮಾನ ಕೃದಂತ (ಡಿ) ಕೃದಂತಾವ್ಯಯ

*ಉತ್ತರ :* __________

38. 'ಕಾಗಿನೆಲೆ ಆದಿಕೇಶವ' ಎಂಬುದು ಇವರ ಅಂಕಿತ :

(ಎ) ಗೋಪಾಲದಾಸರು (ಬಿ) ಪುರಂದರದಾಸರು

(ಸಿ) ಹರಿದಾಸರು (ಡಿ) ಕನಕದಾಸರು

*ಉತ್ತರ :* __________

39. ಅಕ್ಕಮಹಾದೇವಿಯವರ ಆರಾಧ್ಯ ದೈವ

(ಎ) ಭಕ್ತ ಭಂಡಾರಿ ಬಸವಣ್ಣ (ಬಿ) ಚೆನ್ನಮಲ್ಲಿಕಾರ್ಜುನ

(ಸಿ) ಶ್ರೀಶೈಲ ಮಲ್ಲಿಕಾರ್ಜುನ (ಡಿ) ಅಜಗಣ್ಣ

*ಉತ್ತರ :* __________

40. ದುರ್ಯೋಧನನು ಅಡಗಿ ಕುಳಿತದ್ದು ಯಾವ ಸರೋವರದಲ್ಲಿ ?

(ಎ) ಅಚ್ಛೋದ ಸರೋವರ (ಬಿ) ಮಾನಸ ಸರೋವರ

(ಸಿ) ವೈಶಂಪಾಯನ ಸರೋವರ (ಡಿ) ಕೈಲಾಸ ಸರೋವರ

*ಉತ್ತರ :* __________

41. ಡಿ.ವಿ.ಜಿ.ಯವರ ಪ್ರಕಾರ ಮನಸ್ಸಿನ ಉದ್ವೇಗದಲ್ಲಿ ಇರಬೇಕಾದುದು ಯಾವುದು ?

(ಎ) ಮಿತ (ಬಿ) ಅಹಿತ

(ಸಿ) ಹಿತ (ಡಿ) ಸ್ಮಿತ

*ಉತ್ತರ :* __________

42. ಸ್ವಾಮಿ ವಿವೇಕಾನಂದರು ಯುವಕರಿಗೆ ಸಾರಿದ ಸಂದೇಶವೇನು ?

(ಎ) ನಿರ್ವೀರ್ಯರಾಗಿ (ಬಿ) ದುರ್ಬಲರಾಗಿ

(ಸಿ) ಬಲಿಷ್ಠರಾಗಿ (ಡಿ) ವಿದ್ಯಾವಂತರಾಗಿ

*ಉತ್ತರ :* __________

43. ನಮ್ಮೊಳಗಿರುವ ಅಪಾರ ಶಕ್ತಿಯನ್ನು ಪರಿಮಿತಗೊಳಿಸುವುದು ಯಾವುದು ?

(ಎ) ನಿಷೇಧಾತ್ಮಕ ಭಾವನೆ (ಬಿ) ಸಕಾರಾತ್ಮಕ ಭಾವನೆ

(ಸಿ) ಆತ್ಮವಿಶ್ವಾಸ (ಡಿ) ರಚನಾತ್ಮಕ ಭಾವನೆ

*ಉತ್ತರ :* __________

44. 'ಮಚ್ಚರ' ಪದದ ತತ್ಸಮ ರೂಪ ಯಾವುದು ?

(ಎ) ಮರ್ತ್ಯ (ಬಿ) ಮತ್ಸ್ಯ

(ಸಿ) ಅಸೂಯೆ (ಡಿ) ಮತ್ಸರ

*ಉತ್ತರ :* ____________

45. ಇವುಗಳಲ್ಲಿ ಕರ್ಮಧಾರೆಯ ಸಮಾಸಕ್ಕೆ ಉದಾಹರಣೆ ಯಾವುದು ?

(ಎ) ಅರಮನೆ (ಬಿ) ಗರ್ಭಗುಡಿ

(ಸಿ) ಹೆಜ್ಜೇನು (ಡಿ) ಎಣ್ದೆಸೆ

*ಉತ್ತರ :* ____________

46. 'ಹೆಂಡ್ತೀನೆ' ಪದದ ಗ್ರಂಥ ಸ್ವರೂಪ

(ಎ) ಹೆಂಡತಿಯೆ (ಬಿ) ಹೆಂಡತಿಯನ್ನು

(ಸಿ) ಹೆಂಡ್ರನ್ನು (ಡಿ) ಹೆಂಡ್ರುವರನ್ನು

*ಉತ್ತರ :* ____________

47. 'ದಿವಾನ' ಪದವು ಯಾವ ಭಾಷೆಯಿಂದ ಬಂದಿದೆ ?

(ಎ) ಪರ್ಷಿಯನ್ (ಬಿ) ಸಂಸ್ಕೃತ

(ಸಿ) ಹಳಗನ್ನಡ (ಡಿ) ಇಂಗ್ಲೀಷ್

*ಉತ್ತರ :* ____________

48. 'ಚೆನ್ನಾಗಿ' ಎಂಬುದು ಯಾವ ಅವ್ಯಯಕ್ಕೆ ಉದಾಹರಣೆಯಾಗಿದೆ ?

(ಎ) ಅನುಕರಣಾವ್ಯಯ (ಬಿ) ಭಾವಸೂಚಕಾವ್ಯಯ

(ಸಿ) ಸಾಮಾನ್ಯ ಅವ್ಯಯ (ಡಿ) ಕೃದಂತಾವ್ಯಯ

*ಉತ್ತರ :* ____________

49. 'ಬರೆದಾನು' ಎಂಬುದು ಯಾವ ಕ್ರಿಯಾರೂಪ ಪದ ?

(ಎ) ವಿದ್ಯರ್ಥಕ (ಬಿ) ಸಂಭಾವನಾರ್ಥಕ

(ಸಿ) ನಿಷೇಧಾರ್ಥಕ (ಡಿ) ಧಾತುರೂಪ

*ಉತ್ತರ :* ____________

50. 'ಮುದ್ರಾಮಂಜೂಷ' ಕೃತಿಗೆ ಆಧಾರವಾದ ಮೂಲ ಸಂಸ್ಕೃತ ನಾಟಕ ಯಾವುದು ?

(ಎ) ಬುದ್ಧ ನಾಟಕ ಚಕ್ರ (ಬಿ) ರಕ್ತಾಕ್ಷಿ

(ಸಿ) ಮುದ್ರಾರಾಕ್ಷಸ (ಡಿ) ಅಮಾತ್ಯ ರಾಕ್ಷಸ

*ಉತ್ತರ :* ____________

## ಬಿ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 ∞ 2 = 20

51. ಲಿಪಿಯ ಮೂಲಕ ಜ್ಞಾನ ಭಂಡಾರ ಯಾವ ರೀತಿ ಭದ್ರವಾಯಿತು ?

52. ಬುದ್ಧ ಅಂಗುಲಿಮಾಲನಿಗೆ ಯಾವುದನ್ನು ಕಿತ್ತೆಸೆಯಲು ಹೇಳಿದನು ?

53. ಚಾಣಕ್ಯನ ಪ್ರಕಾರ ಮೂರು ಬಗೆಯ ಯುದ್ಧಗಳಾವುವು ?

54. ವೆಂಕಣ್ಣ ಮೇಷ್ಟ್ರು ತನ್ನ ಹೆಂಡತಿ ಬಗ್ಗೆ ಹೇಳಿದ ಒಳ್ಳೆಯ ಮಾತುಗಳಾವುವು ?

55. ಕಡಿದಾಳ್ ಮಂಜಪ್ಪನವರು ಕಾಂಗ್ರೆಸ್ ಚಟುವಟಿಕೆ ಮತ್ತು ವಕೀಲಿ ವೃತ್ತಿ ಎರಡನ್ನು ಹೇಗೆ ನಿರ್ವಹಿಸುತ್ತಿದ್ದರು ?

56. ನಮ್ಮಲ್ಲಿ ಅಪಾರ ಶಕ್ತಿಯಿದ್ದರೂ ಗುಲಾಮರಂತೆ ವರ್ತಿಸಲು ಕಾರಣವೇನು ?

57. ಲಕ್ಷ್ಮೀಧರಾಮಾತ್ಯನ ಶಾಸನ ಸೂಚಿಸಿರುವ ಲೋಕೋಪಕಾರಿ ಕಾರ್ಯಗಳಾವುವು ?

58. ಭಾರತೀಯ ಭಾಷೆಗಳ ಬಗ್ಗೆ ಸೇಡಿಯಾಪು ಕೃಷ್ಣಭಟ್ಟರ ಸಲಹೆಗಳೇನು ?

59. ಶಿವನನ್ನು ಸಾಮಾನ್ಯ ಕಿರಾತನೆಂದು ತಿಳಿದು ಅರ್ಜುನ ಅವನನ್ನು ಏನೆಂದು ಜರೆದನು ?

60. ಅಜಗಣ್ಣನ ಯೋಗದ ಪರಿ ಎಂತಹುದೆಂದು ಮುಕ್ತಾಯಕ್ಕ ಹೇಳಿದ್ದಾಳೆ ?

ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : 8 ∞ 2 = 16

61. ''ನ್ಯೂನ ಹೆಚ್ಚು ನೋಡುವಲ್ಲಿ ಇರುವುದೇತಕೆ ?''

62. ''ಬಿಸಿಲಿನ ಬೇಗೆ ಸುಡಲಿಲ್ಲ''

63. ''ವಿಪರೀತಂ ನಿನ್ನ ನುಡಿಯನೊಬ್ಬರೆ ಬಲ್ಲರ್''

64. 'ಬೇವಿನ ಫಲಂ ಸ್ವಾದಪ್ಪುದೇ''

65. ''ಎನ್ನ ಭಯವಾಳದಿಹ ನೆಲವುಂಟೆ ಓ ಭಿಕ್ಷು ?''

66. ''ಇನ್ನು ವಿಳಂಬಮಂ ಮಾಡಲಾಗದು''

67. ''ಒಂದು ಬೆಳೆಯೋ ಚಿಗುರು ; ಒಂದು ಉದುರೋ ಹಣ್ಣೆಲೆ''

68. ''ಈ ಯುವಕ ಬಹಳ ಸಂಭಾವಿತನಂತೆ ನನಗೆ ತೋರುತ್ತಾನೆ''

69. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ : 1 ∞ 3 = 3

ರಸೆಯಿಂ ಕಾಲಾಗ್ನಿರುದ್ರಂ ಪೊರಮಡುವವೊಲಂತಾ ಸರೋವರ ಮಧ್ಯದಿಂ ಪೊರಮಟ್ಟು

70. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 ∞ 3 = 3

ಬೇಡ ನಿನಗೇಕೆ ಸಾಹಸ ।

ದಾಡಂಬರಂ ಮೆನ್ನೊಳಾಹವಕ್ಕನುಗುಣನಂ ॥

71. ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆಯನ್ನು ವಿಸ್ತರಿಸಿ ಬರೆಯಿರಿ : 1 ∞ 3 = 3

— ಚಿಂತೆಯೇ ಮುಪ್ಪು, ಸಂತೋಷವೇ ಯೌವ್ವನ.
— ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.
— ಬೆಕ್ಕಿಗೆ ಆಟ, ಇಲಿಗೆ ಪ್ರಾಣಸಂಕಟ.

72. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 ∞ 4 = 4

ಗುರುಹಿರಿಯರ ______________________________

______________________________

______________________________

______________________________ದೊರೆಯು ಏತಕೆ.

ಅಥವಾ

ನಗು ಮನದಿ______________________________

______________________________

______________________________

______________________________ಮಂಕುತಿಮ್ಮ.

73. ಕೆಳಗಿನ ಪದ್ಯಭಾಗದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ : 1 ∞ 4 = 4

ತಾನು ಉಣ್ಣದ ಪರರಿಗಿಕ್ಕದ ಧನವಿದ್ದೇತಕೆ
ಮಾನಹೀನನಾಗಿ ಬಾಳ್ವ ಮನುಜನೇತಕೆ
ನ್ಯೂನ ಹೆಚ್ಚು ನೋಡುವಲ್ಲಿ ಇರುವುದೇತಕೆ
ತನ್ನ ಬಳಗವೆರಸಿ ಉಣ್ಣದ ಭಾಗ್ಯವೇತಕೆ.

______________________________

______________________________

______________________________

______________________________

______________________________

______________________________

______________________________

______________________________

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \infty 4 = 8$

— ನಗು–ಅಳುಗಳನ್ನು ಸಮನ್ವಯ ದೃಷ್ಟಿಯಿಂದ ಸ್ವೀಕರಿಸುವುದು ಹೇಗೆ ?

— ತಿಪ್ಪೇನಹಳ್ಳಿಗೆ ಸಾಹೇಬರು ಭೇಟಿ ನೀಡಿದ ಪ್ರಸಂಗವನ್ನು ಕುರಿತು ಬರೆಯಿರಿ.

— ದೀರ್ಘಕರ್ಣ ಸಿಂಹವನ್ನು ಕೊಂದ ಬಗೆ ಹೇಗೆ ?

74.

75.

76. ಕೆಳಗಿನ ಪ್ರಶ್ನೆಗೆ ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 ∞ 4 = 4

— ನಕುಲಾದಿ ಭೀಮರಿಗೆ ದುರ್ಗತಿ ಒದಗಿಬಂದ ಪ್ರಸಂಗ ಯಾವುದು ? ತಿಳಿಸಿ.

ಅಥವಾ

— ದುರ್ಯೋಧನನ ಮೇಲೆ ಗಧಾ ಪ್ರಹಾರ ಮಾಡುವಾಗ ಭೀಮನು ಕೊಟ್ಟ ಕಾರಣಗಳನ್ನು ತಿಳಿಸಿ.

77. — ನಿಮ್ಮ ಶಾಲಾ ವಾರ್ಷಿಕೋತ್ಸವವನ್ನು ಕುರಿತು ಪರ ಊರಲ್ಲಿರುವ ನಿಮ್ಮ ತಾಯಿಗೊಂದು ಪತ್ರ ಬರೆಯಿರಿ. 1 ∞ 5 = 5

ಅಥವಾ

— ವಿದ್ಯುಚ್ಛಕ್ತಿಯ ಕಣ್ಣಾಮುಚ್ಚಾಲೆ ಆಟದಿಂದ ನಿಮ್ಮ ಅಭ್ಯಾಸಕ್ಕೆ ಆಗಿರುವ ತೊಂದರೆಯನ್ನು ತಿಳಿಸಿ ವ್ಯವಸ್ಥಾಪಕರಿಗೊಂದು ಪತ್ರ ಬರೆಯಿರಿ.

78. ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದಕ್ಕೆ** ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : 1 ∞ 5 = 5

— ಜನಸಂಖ್ಯಾ ಸ್ಫೋಟಕ್ಕೆ ಕಾರಣಗಳು ಹಾಗೂ ನಿಯಂತ್ರಣ.

— ಪರಿಸರ ಮಾಲಿನ್ಯಕ್ಕೆ ಕಾರಣಗಳು – ಪರಿಹಾರೋಪಾಯ.

— 'ವರದಕ್ಷಿಣೆ' ಒಂದು ಸಾಮಾಜಿಕ ಪಿಡುಗು.